ಚಕಿತಳಾಗಿ ಆ ವಾಚನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದಳು. "ಅದೆಲ್ಲಾ ನಂಗೊತ್ತಿಲ್ಲ" ಎಂದ ಅಂತು ವಾಚು ಹಾಕಿಕೊಳ್ಳುವುದರಲ್ಲೇ ಕಳೆದುಹೋದ. ಅಂತು ತನ್ನ ಪುಟ್ಟ ಕೈಗೆ ಹ್ಯಾಗ್ಯಾಗೋ ಹಾಕಿದ್ದ ಆ ವಾಚನ್ನು ಸಣ್ಣದಾಗಿ ಸ್ಪರ್ಶಿಸಿದಾಗ ಕಮಲಜ್ಜಿಯ ಮುದಿ ಕೈ ಬೆರಳುಗಳಿಗೆ ಏನೇನೋ ನೆನಪುಗಳು ತಾಗತೊಡಗಿದವು.

"ಹೌದು ಇದೇ ಅದು" ಕಮಲಜ್ಜಿ ವಾಚನ್ನು ನೋಡುತ್ತಾ ಏನೋ ಖಾತ್ರಿಯಾದವಳಂತೆ ಬೆಚ್ಚಿ ಬಿದ್ದಳು. "ಒಂಚೂರು ಇಲ್ಲಿ ಕೊಡೋ ಎಂದು" ಅವನ ಕೈಯಿಂದ ವಾಚು ತೆಗೆದು ಬೆಳಕಿಗೊಡ್ಡುತ್ತಾ ಗೋಲಾಕಾರವಾಗಿದ್ದ ಆ ವಾಚಿನ ಕನ್ನಡಿಯೊಳಗೊಮ್ಮೆ ನೋಡಿದಳು. ಅಲ್ಲೊಂದು ಹಕ್ಕಿಯ ಗುರುತಿದ್ದ ಚಿತ್ರವಿತ್ತು. ಮತ್ತೆ "ಅಯ್ಯೋ ಇದೇ" ಎಂದು ಅಚ್ಚರಿಗೊಳ್ಳುತ್ತ ನಿಂತಳು. ಇದು ಜೋಶಿಯವರ ಮನೆಗೆ ಹೇಗೆ ಹೋಯಿತು? ನನ್ನ ದೇವರ ಕೈಗಡಿಯಾರ?" ಕಮಲಜ್ಜಿ ಆ ಕ್ಷಣಕ್ಕೆ ವಿಚಿತ್ರ ಗಾಬರಿ ಅನುಭವಿಸಿದಳು. ತನಗೆ ಸೇರಬೇಕಾದ, ತನ್ನವನ ಜೀವದ ಕೈಗಡಿಯಾರವಿದು ಎಂದು ಒಳಗೊಳಗೇ ವಿಚಿತ್ರ ಖುಷಿಯಲ್ಲಿಯೂ, ಈ ವಾಚು ಅವರಿಗೆ ಹೇಗೆ ಸಿಕ್ಕಿತು ಅನ್ನೋ ಪ್ರಶ್ನೆಯಲ್ಲಿಯೂ ಮುಳುಗಿದಳು.

ಹೊರಗೆ ಮಳೆ ಸುರಿಯುತ್ತಿತ್ತು, ಕಮಲಜ್ಜಿ ಮಾತ್ರ ಆ ಮಳೆಗೆ ನೆನಪಿನಲ್ಲಿ ತೋಯ್ದು ಹೋದಳು.

ಆವತ್ತು ಇಂತದ್ದೇ ಒಂದು ಮಳೆ, ಮತ್ತು ಇಂತದ್ದೇ ಸಂಜೆ, "ಅವರ ಚಂದದ ಕೈಗೊಂದು ಕೈಗಡಿಯಾರ ಇರಬೇಕು, ಆ ಗಡಿಯಾರದ ಪ್ರತೀ ಕ್ಷಣವೂ ನಾವು ಬಾಳನ್ನು ಮತ್ತೂ ಖುಷಿಯಾಗಿ ಬಾಳುವ ಸಂಕೇತವಾಗಬೇಕು" ಎಂದೆಲ್ಲಾ ಯೋಚಿಸಿ, ತಾನು ಕಾರ್ಕಳ ಪೇಟೆಯಲ್ಲಿ ತನ್ನಲ್ಲಿ ಉಳಿಸಿದ್ದ ಹಣದಿಂದ ಚಂದದ್ದೊಂದು ವಾಚು ತಗೊಂಡು ಅದನ್ನು ಮನೆಗೆ ತಂದು ಯಾರಿಗೂ ಕಾಣದಂತೆ ಅಡಗಿಸಿಟ್ಟಿದ್ದೆಲ್ಲಾ ನೆನಪಾಗತೊಡಗಿತು ಕಮಲಮ್ಮನಿಗೆ.

ಅವರು ತೋಟದ ಕೆಲಸ ಮಾಡಿ ಮನೆಗೆ ಬಂದಾಗ ಅವರ ಮನಃಸ್ಥಿತಿ ನೋಡಿ ನಾನೇ ಅವರ ಕೈಗೆ ಕಟ್ಟಬೇಕು ಎನ್ನುವ ಯೋಚನೆಯಲ್ಲಿದ್ದಾಗ, ಅವರು ಕೆಲಸದಿಂದ ಬಳಲಿ ಮನೆಗೆ ಬಂದರು. ಆದರೂ ಹುರುಪಾಗಿದ್ದರು. ಊಟ ಎಲ್ಲಾ ಆದ ಮೇಲೆ, ಅವರತ್ತ ಹೋಗಿ ಮುಗುಳ್ನಕ್ಕು, "ಎಲ್ಲಿ ನಿಮ್ಮ ಕೈ ಕೊಡಿ" ಎನ್ನುತ್ತಾ ಅವರ ಕೈಗೆ ಬೆಳ್ಳಿ ಬಣ್ಣದ ಕೈಗಡಿಯಾರ ಕಟ್ಟಿದ್ದೆ. ಆ ಗಡಿಯಾರದ ನಡುವೆ ವಿಶೇಷವಾಗಿ ಮಾಡಿಸಿದ್ದ ಸಣ್ಣದ್ದೊಂದು ಹಕ್ಕಿಯ ಚಿತ್ರವಿತ್ತು. ಅವರು ನಿಜಕ್ಕೂ ಆ ಗಡಿಯಾರಕ್ಕಿಂತಲೂ ಜಾಸ್ತಿ ಹೊಳಪಾಗಿದ್ದರು. ನನ್ನ ಕೈಯನ್ನು ಗಟ್ಟಿ ಹಿಡಕೊಂಡು ಮುದ್ದಿಸಿದ್ದರು. "ನೀನು ಬರೀ ಕೈಗಡಿಯಾರ ಕೊಟ್ಟಿದ್ದಲ್ಲ ಬಾಳಿನ ಎಲ್ಲಾ ಕ್ಷಣಗಳನ್ನು ನಂಗೇ ಕೊಟ್ಟಿದ್ದಿ" ಎಂದವರು ಮತ್ತೂ ಮುದ್ದಿಸಿದ್ದರು. ಆವತ್ತಿಂದ ಅವರು ಆ ಕೈಗಡಿಯಾರವನ್ನು ಅದೆಷ್ಟು ಜೋಪಾನ ಮಾಡಿದ್ದರೆಂದರೆ, ನಂಗೆ ಅದು ಕಳೆದು ಹೋಗುತ್ತದೆ ಅನ್ನೋ ಚಿಂತೆಯೇ ಇರಲಿಲ್ಲ. ಹಳೆಯದನ್ನೆಲ್ಲಾ ಯೋಚಿಸುತ್ತಿದ್ದಂತೆ ಕಮಲಜ್ಜಿಗೆ ಪುಳಕ ಅನ್ನಿಸಿತು.

ತನ್ನವರ ಕೈಯಲ್ಲಿ ಆ ಕೈಗಡಿಯಾರ ರಾರಾಜಿಸುತ್ತಿದ್ದದನ್ನು ಈಗ ಮತ್ತೆ ನೆನಪಿಸಿಕೊಂಡಳು. ಈಗ ಆ ಕೈಗಡಿಯಾರ ಸಿಕ್ಕಿದ್ದು ಕಮಲಜ್ಜಿಗೆ ಗಂಡನೇ ಸಿಕ್ಕಂತಾಗಿತ್ತು. ಕಮಲಜ್ಜಿಯ ಕಣ್ಣಲ್ಲಿ ಮಳೆಯಂತಹ ಹನಿಯೊಂದು ಸಣ್ಣಗೇ ಜಾರಿ ಜಗಲಿಯಲ್ಲಿದ್ದ ಮಳೆ ಹನಿಗಳನ್ನು ಸೇರಿತು.

"ಆದರೆ ಈ ಕೈಗಡಿಯಾರ ಜೋಶಿಯವರ ಮನೆಗೆ ಹೇಗೆ ಹೋಯಿತು? ಇವರೇ ಏನಾದರೂ ಕೊಟ್ಟರಾ? ಅಥವಾ ಎಲ್ಲಾದರೂ ಬಿದ್ದು ಹೋಗಿದ್ದು ಮನೆಯವರಿಗೆ ಸಿಕ್ಕಿತಾ? ಅಥವಾ ಯಾರಾದರೂ ಕದ್ದು ಅವರಿಗೆ ಮಾರಿದರಾ?" ಏನೊಂದೂ ಹೊಳೆಯದೇ ಕಮಲಮ್ಮ ಅಚ್ಚರಿಯೇ ಆದಳು. ಕೊನೆಯ ಬಾರಿ ತನ್ನವರ ಕೈಯಲ್ಲಿ ಆ ಕೈಗಡಿಯಾರವನ್ನು ನೋಡಿದ ನೆನಪಾಗಲಿಲ್ಲ ಅವಳಿಗೆ.